# ಸಂಸ್ಕೃತ ಶಿಕ್ಷಕರಿಗೆ ಪುನಶ್ಚೇತನ ಶಿಬಿರ–ಬೆಂಗಳೂರು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಪಾಠಶಾಲೆಗಳ ಅಧ್ಯಾಪಕ ಸಂಘ ಹಾಗೂ ಶ್ರೀ ವೇದವಿಜ್ಞಾನ ವಿದ್ಯಾಪೀಠದ ಸಹಯೋಗದೊಂದಿಗೆ ಬೆಂಗಳೂರು ನಗರ ಹಾಗೂ ಗ್ರಾಮಾಂತರದ ಪಾಠಶಾಲೆಗಳ ಅಧ್ಯಾಪಕರಿಗಾಗಿ 29.04.2011ರಿಂದ 01.05.2011ರವರೆಗೆ ಮೂರು ದಿನಗಳ ಪುನಶ್ಚೇತನ ಶಿಬಿರವನ್ನು ಶ್ರೀ ಶ್ರೀ ರವಿಶಂಕರ ಗುರೂಜಿ ಆಶ್ರಮದ 'ಗೌರಿ' ಸಭಾಂಗಣದಲ್ಲಿ ಆಯೋಜಿಸಿತ್ತು.

ಪಾಠಶಾಲೆಯ ಸಂಸ್ಕೃತ ಅಧ್ಯಾಪಕರ ಹಿತದೃಷ್ಟಿಯಿಂದ ಇದನ್ನು ಆಯೋಜಿಸಲಾಗಿತ್ತು. ದಿನಾಂಕ 29.04.2011ರಂದು ಬೆಳಿಗ್ಗೆ ಶ್ರೀ ಶ್ರೀ ರವಿಶಂಕರ ಗುರೂಜಿ ವೇದವಿಜ್ಞಾನ ವಿದ್ಯಾಪೀಠದ ವಿದ್ಯಾರ್ಥಿಗಳ ವೇದಘೋಷ ಹಾಗೂ ವಿದ್ವಾನ್ ವಿಜಯ ಹಾವನೂರು ಅವರ ಪ್ರಾರ್ಥನೆಯೊಂದಿಗೆ ಆರಂಭವಾದ ಶಿಬಿರದ ಉದ್ಘಾಟನೆಯನ್ನು ಸನ್ಮಾನ್ಯ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಶಿವಕುಮಾರಸ್ವಾಮಿಗಳು ದೀಪ ಬೆಳಗುವುದರೊಂದಿಗೆ ನೆರವೇರಿಸಿದರು. ಡಾ. ಶ್ರೀನಿವಾಸ ವರಖೇಡಿಯವರು ಎಲ್ಲರನ್ನೂ ಸ್ವಾಗತಿಸಿದರು.

ಶ್ರೀಯುತರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕಾಳಿದಾಸಾದಿ ಕವಿಗಳ ಅನೇಕ ಉಕ್ತಿಗಳಿಂದ ಅಧ್ಯಾಪಕರ ಅಧ್ಯಯನ ಹಾಗೂ ಅಧ್ಯಾಪನ ಉತ್ತಮ ಮಟ್ಟದ್ದಾಗಿರಬೇಕು ಎಂಬುದನ್ನು ಒತ್ತಿ ಹೇಳಿದರು. ನಮ್ಮ ಜ್ಞಾನವು ಶಿಷ್ಯರ ಬುದ್ಧಿಯಲ್ಲಿ ನೆಲೆ ನಿಲ್ಲುವಂತೆ ಬೋಧಿಸಬೇಕಾದುದು ಪ್ರತಿಯೊಬ್ಬ ಅಧ್ಯಾಪಕನ ಕರ್ತವ್ಯ ಎಂದರು.

ಸನ್ಮಾನ್ಯ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಂಸ್ಕೃತ ಅಧ್ಯಾಪಕರು ಹೆಚ್ಚಿನ ಆತ್ಮವಿಶ್ವಾಸದಿಂದ ಬೇರೆ ಬೇರೆ ಗ್ರಂಥಗಳನ್ನು ಅಧ್ಯಯನ ಮಾಡಿ ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕೆಂದು ಕರೆ ನೀಡಿದರು.

ಮೂರು ದಿನಗಳ ಕಾಲ ಈ ಪುನಶ್ಚೇತನ ಶಿಬಿರವು ಹಲವಾರು ವಿದ್ವಾಂಸರ ಉಪನ್ಯಾಸಗಳ ಮೂಲಕ ಹೊಸ ಹೊಸ ರೀತಿಯ ಸಂಸ್ಕೃತಾಧ್ಯಾಪನ ಕಲೆಯನ್ನು ಪರಿಚಯಿಸಿತು. ಡಾ. ನಾಗರತ್ನಾ ಹೆಗಡೆಯವರು ಪಾಠಶಾಲೆಯ ಪಾಠ್ಯಪುಸ್ತಕಗಳ ವಿಷಯಗಳನ್ನು ಯುಕ್ತಿಯುಕ್ತವಾಗಿ ಹೊಸ ವಿಧಾನಗಳ ಮೂಲಕ ಬೋಧಿಸುವ ಕ್ರಮಗಳನ್ನು ಅಚ್ಚುಕಟ್ಟಾಗಿ ವಿವರಿಸಿದರು. ಪಾಠ್ಯಾಂಶಗಳಲ್ಲಿ ಇರುವ ಸಂಶಯಗಳ ಬಗ್ಗೆಯೂ ವಿಚಾರವಿಮರ್ಶೆ ಹಾಗೂ ಚರ್ಚೆಯನ್ನು ನಡೆಸಿಕೊಟ್ಟರು.

ನಿರ್ದೇಶಕರಾದ ಡಾ. ಶ್ರೀನಿವಾಸ ವರಖೇಡಿಯವರು ಮೂರೂ ದಿನಗಳಲ್ಲಿಯೂ ಅನೇಕ ಅವಧಿಗಳ ಕಾಲ ಅಧ್ಯಾಪಕರೊಂದಿಗೆ ಚರ್ಚಿಸಿ ಸಂಸ್ಕೃತ ಕಲಿಕೆಯಲ್ಲಿನ ಹೊಸ ಆಯಾಮಗಳನ್ನು ಪರಿಚಯಿಸಿದರು. 'ಶತಶ್ಲೋಕೈಶ್ಚ ಪಂಡಿತಃ' ಎಂಬ ಮಾತನ್ನು ಉಲ್ಲೇಖಿಸಿ ಯಾರೇ ಆಗಲಿ ನೂರು ಶ್ಲೋಕಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ಮನನ ಮಾಡಿದರೆ ಖಂಡಿತವಾಗಿಯೂ ಪಂಡಿತನಾಗುತ್ತಾನೆ ಎಂಬ ಸತ್ಯವನ್ನು ತೋರಿಸಿಕೊಟ್ಟರು.

30.04.2011ರಂದು ಮಧ್ಯಾಹ್ನ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಚಂದ್ರಮೌಳಿ ಎಸ್. ನಾಯ್ಕರ ಅವರು ತಮ್ಮ ಪಾಂಡಿತ್ಯಪೂರ್ಣವಾದ ಉಪನ್ಯಾಸದಿಂದ ಎಲ್ಲರಲ್ಲೂ ಚೈತನ್ಯವನ್ನು ತುಂಬಿದರು. ಸಂಸ್ಕೃತ ಅಧ್ಯಾಪಕರು ಅಧ್ಯಯನ ಮಾಡುವುದರ ಜೊತೆಗೆ ಸಂಶೋಧನೆಯಲ್ಲೂ ತೊಡಗಬೇಕೆಂದು ಒತ್ತಿ ಹೇಳಿದರು.

ದಿನಾಂಕ 01.05.2011ರಂದು ವಾಸವಿ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರಾದ ವಿದ್ವಾನ್ ನರೇಂದ್ರರವರು ಪ್ರಥಮಾ, ಕಾವ್ಯ ತರಗತಿಗಳ ಪಾಠ್ಯಾಂಶಗಳನ್ನು ಅತ್ಯಂತ ಆತ್ಮೀಯವಾಗಿ ಮಕ್ಕಳಿಗೆ ಬೋಧಿಸಬಹುದೆಂಬುದನ್ನು ತಿಳಿಸಿದರು. ಇವರ ಬೋಧನಾಕ್ರಮ ಉತ್ಕೃಷ್ಟವಾಗಿತ್ತು.

ಈ ಮೂರು ದಿನಗಳಲ್ಲೂ ಎಲ್ಲ ಅಧ್ಯಾಪಕರಿಗೂ ಯೋಗ್ಯವಾದ ವಾಸವ್ಯವಸ್ಥೆ, ಭೋಜನದ ವ್ಯವಸ್ಥೆ, ಪ್ರಾರ್ಥನೆ, ಅಧ್ಯಾತ್ಮ ಚಿಂತನೆ, ಬೆಳಿಗ್ಗೆ ಹಾಗೂ ಸಾಯಂಕಾಲದಲ್ಲಿ ವಾಯುವಿಹಾರ ಇತ್ಯಾದಿ ವ್ಯವಸ್ಥೆಗಳನ್ನು ಶಿಬಿರದ ಸಹ ಸಂಚಾಲಕರಾದ ವಿದ್ವಾನ್ ವಿಷ್ಣು ಭಟ್‌ರವರು ಶ್ರೀ ಶ್ರೀ ರವಿಶಂಕರ ಗುರೂಜಿಯವರ ಆಶೀರ್ವಾದ ಹಾಗೂ ಸಹಕಾರದೊಂದಿಗೆ ಅಚ್ಚುಕಟ್ಟಾಗಿ ಮಾಡಿದರು.

ಶಿಬಿರದ ಸಂಚಾಲಕರಾದ ಡಾ. ಎಸ್.ಎನ್. ಪ್ರಾಣೇಶರವರು ಮೂರು ದಿನಗಳ ಕಾಲವೂ ಅಧ್ಯಾಪಕರೊಂದಿಗೆ ಆಶ್ರಮದಲ್ಲಿಯೇ ಇದ್ದು ಸಂಸ್ಕೃತ ಭಾಷೆಯಲ್ಲಿ ಎಲ್ಲರನ್ನೂ ತೊಡಗಿಸಿದ್ದರು. ಸಂಸ್ಕೃತ ಸಂಭಾಷಣೆಯ ತರಗತಿಗಳನ್ನು ನಡೆಸಿ ಯಾವಾಗಲೂ ಸಂಸ್ಕೃತದ ಮೂಲಕವೇ ಸಂಭಾಷಣೆ ಮಾಡಬೇಕೆಂದು ಪ್ರೇರಣೆ ನೀಡುತ್ತಿದ್ದರು.

ಈ ಪುನಶ್ಚೇತನ ಶಿಬಿರದ ಸಮಾರೋಪ ಕಾರ್ಯಕ್ರಮವು ದಿನಾಂಕ 01.05.2011ರಂದು ಮಧ್ಯಾಹ್ನ 4 ಗಂಟೆಗೆ ವೇದವಿಜ್ಞಾನ ವಿದ್ಯಾಪೀಠದ ವಿದ್ಯಾರ್ಥಿಗಳ ವೇದಘೋಷದೊಂದಿಗೆ ಆರಂಭವಾಯಿತು. ಸಂಸ್ಕೃತ ಅಧ್ಯಾಪಕರಾದ ಶ್ರೀ ವಿಜಯ ರಾಘವನ್ ಪ್ರಾರ್ಥನೆಯನ್ನು ನೆರವೇರಿಸಿದರು. ಕೆಲವು ಸಂಸ್ಕೃತ ಅಧ್ಯಾಪಕರು ತಮ್ಮ ಮೂರು ದಿನಗಳ ಅನುಭವಗಳನ್ನು ಹೇಳಿ ಸಂತೋಷಪಟ್ಟರು.

ಸಮಾರೋಪ ಭಾಷಣದಲ್ಲಿ ಚನ್ನೇನಹಳ್ಳಿ ವೇದವಿಜ್ಞಾನ ಗುರುಕುಲದ ಸಂಸ್ಥಾಪಕರು ಹಾಗೂ ಪ್ರಥಮ ಪ್ರಾಚಾರ್ಯರಾದ ಡಾ. ಕೋಟೆಮನೆ ರಾಮಚಂದ್ರ ಭಟ್ಟರು ಸಂಸ್ಕೃತ ವಿದ್ವಾಂಸರು ಹಾಗೂ ಅಧ್ಯಾಪಕರು ತಮ್ಮ ನೈಚ್ಯಾನುಸಂಧಾನವನ್ನು ಬಿಡಬೇಕು, ಉತ್ತಮ ಜ್ಞಾನವನ್ನು ಸಂಪಾದಿಸಿ ಸಜ್ಜನಿಕೆಯನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು. ಈಗ ಜಗತ್ತಿನಲ್ಲಿ ಸಂಸ್ಕೃತ, ಆಯುರ್ವೇದ, ಯೋಗ, ಅಧ್ಯಾತ್ಮ –ಈ ನಾಲ್ಕು ವಿದ್ಯೆಗಳು ಚಾಲ್ತಿಯಲ್ಲಿವೆ. ಬೇರೆ ಎಲ್ಲ ವಿದ್ಯೆಗಳು ತಮ್ಮ ಬೆಲೆ ಕಳೆದುಕೊಳ್ಳುತ್ತಿವೆ ಎಂಬ ಅಂಶವನ್ನು ಅನೇಕ ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿದರು. ಶ್ರೀಯುತರು ಎಲ್ಲ ಅಧ್ಯಾಪಕರಿಗೂ ಪ್ರಮಾಣಪತ್ರಗಳನ್ನು ವಿತರಿಸಿ ಆಶೀರ್ವದಿಸಿದರು.

ಅನಂತರ ಸನ್ಮಾನ್ಯ ಕುಲಪತಿಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬಾಲ್ಯದಲ್ಲಿ ತಾವು ಕಷ್ಟಪಟ್ಟು ಸಂಸ್ಕೃತ ಅಧ್ಯಯನದಲ್ಲಿ ತೊಡಗಿದ್ದನ್ನು ಹಾಗೂ ಆಸಕ್ತಿಯಿಂದ ಅಭ್ಯಾಸ ಮಾಡಿದ್ದನ್ನು ಉಲ್ಲೇಖಿಸಿದರು. ಸಂಸ್ಕೃತಾಧ್ಯಾಪಕರು ತಮ್ಮ ವೃತ್ತಿಯನ್ನು ಪ್ರೀತಿಸಬೇಕು. ಆಗಲೇ ಆಂತರಿಕ ವಿಕಾಸ ಹಾಗೂ ವಿದ್ಯಾರ್ಥಿಗಳ ಕಲ್ಯಾಣ ಎಂದು ಅಭಿಪ್ರಾಯಪಟ್ಟರು. ಶ್ರೀಯುತರ ಮಾತಿನಲ್ಲಿ ಅವರಿಗೆ ಸಂಸ್ಕೃತ ಭಾಷೆಯ ಬಗೆಗೆ ಇರುವ ಗೌರವ, ಕಳಕಳಿ, ಸಂಸ್ಕೃತವು ಬೆಳೆದು ಸಮಗ್ರ ದೇಶದ ಅಭಿವೃದ್ಧಿಯಾಗಬೇಕೆಂಬ ಭಾವನೆ ಸ್ಪಷ್ಟವಾಗಿ ವ್ಯಕ್ತವಾಗುತ್ತಿದ್ದವು.
ಒಟ್ಟಿನಲ್ಲಿ ಮೂರು ದಿವಸಗಳ ಶಿಬಿರದ ಸಾರ್ಥಕತೆಯು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಡಾ. ಶ್ರೀನಿವಾಸ ವರಖೇಡಿ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ●

# ಪುನಶ್ಚೇತನ ಶಿಬಿರ–ಇಂಚಲ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶ್ರೀ ಶಿವಯೋಗೀಶ್ವರ ಸಂಸ್ಥಾನ ಮಠದಲ್ಲಿ 2011ರ ಮೇ 8ರಿಂದ 10ರವರೆಗೆ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗಾಗಿ ಪುನಶ್ಚೇತನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಮೇ 8ರಂದು ಬೆಳಗ್ಗೆ 10 ಗಂಟೆಗೆ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಮಹಾಂತೇಶ ಎಸ್. ಕೌಜಲಗಿ ಅವರು ಶಿಬಿರವನ್ನು ಉದ್ಘಾಟಿಸಿದರು. ದಿವ್ಯಸಾನಿಧ್ಯವನ್ನು ಇಂಚಲ ಗ್ರಾಮದ ಶ್ರೀ ಶಿವಯೋಗೀಶ್ವರ ಸಂಸ್ಥಾನಮಠದ ಶ್ರೀ ಶ್ರೀ ಶ್ರೀ ಡಾ. ಶಿವಾನಂದ ಭಾರತೀ ಸ್ವಾಮಿಗಳು ವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಚಂದ್ರಮೌಳಿ ಎಸ್. ನಾಯ್ಕರ ಅವರು ವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಮಲ್ಲಿಕಾರ್ಜುನ ಪರಡ್ಡಿ ಹಾಗೂ ಶ್ರೀ ಶಿವಾನಂದ ಭಾರತೀ ಶಿಕ್ಷಣ ಸಂಸ್ಥೆಯ ಚೇರ್‌ಮನ್‌ರಾದ ಡಿ.ಬಿ. ಮಲ್ಲೂರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಮಲ್ಲಿಕಾರ್ಜುನ ಹಿರೇಮಠ ವೇದಘೋಷ ಮಾಡಿದರು. ಸೂರ್ಯನಾರಾಯಣ ಭಟ್ಟ ಅವರು ಸ್ವಾಗತಿಸಿದರು. ಬಿ.ಎಸ್. ಬಾಸೂರ ಪ್ರಾಸ್ತಾವಿಕ ಭಾಷಣ ಮಾಡಿದರು. ಬಿ.ಎನ್. ಹೊಸೂರ ವಂದಿಸಿದರು.

ಅಂದು ವಿದ್ವಾನ್ ಬಿ.ಎಸ್. ಬಾಸೂರ್ ಅವರಿಂದ ಭಾಷಾಂತರ ಅನುವಾದ ಮತ್ತು ಸಂಸ್ಕೃತ ಪ್ರಾಥಮಿಕ ಬೋಧನಾ ಕ್ರಮ, ಶ್ರೀ ಸೂರ್ಯನಾರಾಯಣ ಭಟ್ ಅವರಿಂದ ಸಂಸ್ಕೃತ ಸಂಭಾಷಣೆಯ ಮಹತ್ವ ಮತ್ತು ಚಿಂತನಗೋಷ್ಠಿ ನಡೆಯಿತು.

ದಿನಾಂಕ 09.05.2011ರ ಸೋಮವಾರ ಡಾ. ಲಕ್ಷ್ಮೀಕಾಂತ ವಿ. ಮೋಹರೀರ ಅವರಿಂದ ಯೋಗಾಭ್ಯಾಸ ತರಗತಿ, ವಿ.ಎಸ್. ಕಲಕೇರಿ ಅವರಿಂದ ಅಧ್ಯಾತ್ಮ ಚಿಂತನೆ, ಎಸ್.ಡಿ. ಕರಾಡೆ ಅವರಿಂದ ಸಂಸ್ಕೃತ ಸಂಭಾಷಣೆ, ವಿದುಷೀ ವಿಜಯಲಕ್ಷ್ಮೀ ಅವರಿಂದ ಸಂಸ್ಕೃತ ವ್ಯಾಕರಣ ಮತ್ತು ಪ್ರಯೋಗ ಕುರಿತು ಉಪನ್ಯಾಸ, ಡಾ. ಎಸ್.ಎನ್. ಪ್ರಾಣೇಶ್ ಅವರಿಂದ ಸಂಸ್ಕೃತ ಸಾಹಿತ್ಯ ಪರಿಚಯ ಮತ್ತು ಸ್ವಾಧ್ಯಾಯ ಕ್ರಮ, ಶ್ರೀ ಸೂರ್ಯನಾರಾಯಣ ಭಟ್ ಅವರಿಂದ ಚಿಂತನಗೋಷ್ಠಿಗಳು ನಡೆದವು.

ದಿ. 10.05.2011ರಂದು ಡಾ. ಲಕ್ಷ್ಮೀಕಾಂತ ಅವರಿಂದ ಯೋಗ ಶಿಬಿರ, ವಿ.ಎಸ್. ಕಲಕೇರಿ ಅವರಿಂದ ಅಧ್ಯಾತ್ಮ ಚಿಂತನೆ, ಸಂಯೋಜಕರಿಂದ ಸಂಸ್ಕೃತ ಸಂಭಾಷಣೆ ತರಗತಿ, ಪಿ.ಆರ್. ಹಿರೇಮಠ ಅವರಿಂದ ಕಾವ್ಯ ಬೋಧನಾ ಪದ್ಧತಿಗಳು ನಡೆದವು. ಎಲ್ಲ ಶಿಬಿರಾರ್ಥಿಗಳು ತಮ್ಮ ಅನುಭವವನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಹಾಗೂ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಡಾ. ವೇಣಿಮಾಧವಶಾಸ್ತ್ರೀ ಶಿಬಿರಾರ್ಥಿಗಳ ಅನಿಸಿಕೆಯನ್ನು ಆಲಿಸಿದರು.

ದಿ. 10.05.2011ರಂದು 3 ಗಂಟೆಗೆ ಸಂಸ್ಕೃತ ಶಿಕ್ಷಕರ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭ ಇಂಚಲ ಶ್ರೀ ಸಾಧು ಸಂಸ್ಥಾನಮಠದ ಶ್ರೀ ಡಾ. ಶಿವಾನಂದ ಭಾರತೀ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಜರುಗಿತು.

ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಡಾ. ವೇಣೀಮಾಧವಶಾಸ್ತ್ರಿ ಅವರು ಸಮಾರೋಪ ಭಾಷಣ ಮಾಡುತ್ತ, ಶಿಕ್ಷಕರು ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡಬೇಕು. ದೃಢಸಂಕಲ್ಪ ಮಾಡಬೇಕು. ಕೇವಲ ಸಂಸ್ಕೃತ ಭಾಷೆಯ ಗ್ರಂಥಗಳನ್ನು ಓದದೇ ಇಂಗ್ಲಿಷ್ ಭಾಷಾಗ್ರಂಥಗಳ ಅಧ್ಯಯನದಿಂದ ಪ್ರೌಢತೆ ಹೆಚ್ಚುತ್ತದೆ ಎಂದರು. ಸಮಾಜವು ಶಿಕ್ಷಕರನ್ನು ಗೌರವದಿಂದ ಕಾಣುತ್ತದೆ. ಅದಕ್ಕೆ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು. ಸಂಸ್ಕೃತವನ್ನು ಸಂರಕ್ಷಣೆ ಮಾಡುವ ಹೊಣೆ ಶಿಕ್ಷಕರ ಮೇಲಿದೆ ಎಂದರು.

ಅತಿಥಿಗಳಾಗಿ ಶ್ರೀ ಶಿವಯೋಗೀಶ್ವರ ಸಾಧು ಸಂಸ್ಥಾನ ಮಠದ ಚೇರ್‌ಮನ್ ಡಿ.ಬಿ. ಮಲ್ಲೂರ ಮಾತನಾಡಿ, ಸಂಸ್ಕೃತ ಭಾಷೆಯ ಬೆಳವಣಿಗೆಗೆ ಶಿಬಿರ ಅಗತ್ಯವಾದದ್ದು ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಮಾತನಾಡಿ, ತೆಲುಗು, ಕನ್ನಡದ ಬೆಳವಣಿಗೆಗೆ ಸಂಸ್ಕೃತ ಭಾಷೆ ಸಹಕಾರಿ. ಸಂಸ್ಕೃತಕ್ಕೆ ಭವ್ಯವಾದ ಚರಿತ್ರೆ ಇದೆ. ಕನ್ನಡದಲ್ಲಿ ಶೇ. 80ರಷ್ಟು ಸಂಸ್ಕೃತ ಪದಗಳಿವೆ ಎಂದರು.

ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡಾ. ವೇಣಿಮಾಧವಶಾಸ್ತ್ರೀ, ವಿದ್ವಾನ್ ಸೂರ್ಯನಾರಾಯಣ ಭಟ್ ಅವರಿಗೆ ವಿಭಾಗೀಯ ಸಂಸ್ಕೃತ ಶಿಕ್ಷಕರ ಸಂಘದಿಂದ ಸನ್ಮಾನಿಸಲಾಯಿತು.

ಮಲ್ಲಿಕಾರ್ಜುನ ಹಿರೇಮಠ ವೇದಘೋಷ ಮಾಡಿದರು. ಗೀತಾ ಬಂಕಾಪೂರ, ಸುನಂದಾ ರಾಸನಕರ ಸಂಸ್ಕೃತ ಗೀತೆ ಹಾಡಿದರು. ಸೂರ್ಯನಾರಾಯಣ ಭಟ್ ಸ್ವಾಗತಿಸಿದರು. ಡಾ. ಲಕ್ಷ್ಮೀಕಾಂತ ಮೊಹರೀರ ಪರಿಚಯಿಸಿದರು.

ಎಂ.ಎಂ. ಹೊಸಮನಿ, ಗಣಪತಿ ಭಟ್, ಶ್ರೀಮತಿ ಎನ್.ವಿ. ತಿಪ್ಪಾ ಶಿಬಿರದ ಅನಿಸಿಕೆ ಹೇಳಿದರು.
ಸಂಯೋಜಕ ಎಸ್.ಡಿ. ಕರಾಡೆ, ಎಸ್.ಜಿ. ನಿಡಗುಂದಿ, ವಿಶ್ವವಿದ್ಯಾಲಯದ ಮಂಜುನಾಥ ಉಪಸ್ಥಿತರಿದ್ದರು. ಶಿಕ್ಷಕರಾದ ಎಂ.ಎಂ. ಹೊಸಮನಿ ವಂದಿಸಿದರು.

# ಪುನಶ್ಚೇತನ ಶಿಬಿರ–ರಾಮನಗರ

17.05.2011ರಿಂದ 19.05.2011ರವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಮೂರು ದಿನಗಳ ಪುನಶ್ಚೇತನ ಶಿಬಿರವನ್ನು ನಡೆಸಿತು. ರಾಮನಗರದ ಅರ್ಚಕರಹಳ್ಳಿಯಲ್ಲಿರುವ ಬಿ.ಜಿ.ಎಸ್. ಅಂಧ ಮಕ್ಕಳ ಶಾಲೆಯಲ್ಲಿ ಇದು ನಡೆಯಿತು. ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಹಾಗೂ ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಆಶ್ರಯ ಹಾಗೂ ಸಹಯೋಗದೊಂದಿಗೆ ಈ ಶಿಬಿರ ನಡೆಯಿತು. ಸನಿವಾಸವಾಗಿ ನಡೆದ ಈ ಶಿಬಿರದಲ್ಲಿ ಸುಮಾರು 64 ಶಿಕ್ಷಕರು ಭಾಗವಹಿಸಿದ್ದರು.

ದಿನಾಂಕ 17.05.2011ರಂದು ಬೆಳಿಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭವು ನಡೆಯಿತು. ಅದರ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಚಂದ್ರಮೌಳಿ ಎಸ್. ನಾಯ್ಕರ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೆ. ರಾಜು ಅವರು ಭಾಗವಹಿಸಿದ್ದರು. ಇನ್ನೋರ್ವ ಮುಖ್ಯ ಅತಿಥಿಗಳಾಗಿ ರಾಮನಗರ–ಚನ್ನಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶ್ರೀ ರಾಜಶೇಖರ್ ಪಾಲ್ಗೊಂಡಿದ್ದರು. ವೇದಿಕೆಯಲ್ಲಿ ಆದಿಚುಂಚನಗಿರಿ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜಿನ ಪ್ರಾಚಾರ್ಯರಾದ ಶ್ರೀ ನಂಜುಂಡಯ್ಯ ಹಾಗೂ ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಶೇಖರಯ್ಯ ಉಪಸ್ಥಿತರಿದ್ದರು.

ಅಂದು ಭೋಜನ ವಿರಾಮದ ನಂತರ ಮೊದಲ ಅವಧಿಯಲ್ಲಿ ವಿದ್ವಾನ್ ಕೆ. ಗಂಗಣ್ಣನವರು 'ಸಂಸ್ಕೃತ ಪಾಠಶಾಲೆಗಳಲ್ಲಿ ಸೇತುಬಂಧ ಬೋಧನಾಕ್ರಮ'ದ ಬಗ್ಗೆ ತಿಳಿಸಿದರು. ಆ ನಂತರದ ಅವಧಿಯಲ್ಲಿ ಶ್ರೀಮತಿ ಸಾವಿತ್ರಿ 'ಸಂಸ್ಕೃತ ಸಂಭಾಷಣ ಅಭ್ಯಾಸ'ವನ್ನು ಮಾಡಿಸಿದರು.

ಆ ಮೇಲಿನ ಅವಧಿಯಲ್ಲಿ ಡಾ. ಮಹೇಶ ಕಾಕತ್ಕರ್ ಅವರು 'ಲೇಖನ ದೋಷಗಳು' ಎಂಬ ವಿಷಯದಲ್ಲಿ ಮಾಹಿತಿಯನ್ನು ತಿಳಿಸಿದರು. ಆ ಮೇಲೆ ಸ್ತೋತ್ರ ಪಠನದ ಬಳಿಕ ಡಾ. ಮಹೇಶ ಕಾಕತ್ಕರ್ ಅವರು 'ಸರಳ ಸಂಸ್ಕೃತ' ಎಂಬ ವಿಷಯದಲ್ಲಿ ಮಾಹಿತಿಯನ್ನು ತಿಳಿಸಿದರು.

ಭೋಜನಾನಂತರ ಶಿಬಿರಾರ್ಥಿಗಳ ಪ್ರತಿಭಾ ಪ್ರದರ್ಶನದೊಂದಿಗೆ ಅಂದಿನ ಕಾರ್ಯಕಲಾಪಗಳು ಸಮಾಪನಗೊಂಡವು. 18.05.2011ರಂದು ಬೆಳಿಗ್ಗೆ ಶ್ರೀ ಫಾಲನೇತ್ರಯ್ಯ ಅವರ ನೇತೃತ್ವದಲ್ಲಿ ಪ್ರಾರ್ಥನೆ ಹಾಗೂ ಯೋಗಾಭ್ಯಾಸವು ನಡೆಯಿತು. ಉಪಾಹಾರದ ಅನಂತರ ಮೊದಲ ಅವಧಿಯಲ್ಲಿ 'ಸರಳ ಸಂಸ್ಕೃತ ಪರಿಚಯ'ದ ಮುಂದುವರಿದ ಭಾಗವನ್ನು ತಿಳಿಸಿದರು.

ಆ ನಂತರದ ಅವಧಿಯಲ್ಲಿ ಶ್ರೀಮತಿ ಸಾವಿತ್ರಿ ಪೂಜಾರ್ ಅವರು ಸಂಸ್ಕೃತ ಸಂಭಾಷಣ ಅಭ್ಯಾಸವನ್ನು ನಡೆಸಿದರು. ಮುಂದಿನ ಅವಧಿಯಲ್ಲಿ ವಿದ್ವಾನ್ ಶ್ರೀ ನರೇಂದ್ರ ಅವರು 'ಸಂಸ್ಕೃತ ಸಾಹಿತ್ಯ ಪರಿಚಯ'ವೆಂಬ ವಿಷಯದಲ್ಲಿ ಮಾಹಿತಿಪೂರ್ಣ ತರಗತಿಯನ್ನು ನಡೆಸಿಕೊಟ್ಟರು.

ಭೋಜನಾನಂತರ ಮೊದಲ ಅವಧಿಯಲ್ಲಿ ಶ್ರೀಮತಿ ಸಾವಿತ್ರೀ ಪೂಜಾರ್ ಅವರು ಸಂಭಾಷಣಾಭ್ಯಾಸವನ್ನು ನಡೆಸಿಕೊಟ್ಟರು. ಆ ಮೇಲೆ ಮುಂದಿನ ಅವಧಿಯಲ್ಲಿ ವಿದ್ವಾನ್ ಶ್ರೀ ನರೇಂದ್ರ ಅವರು 'ಸ್ವಾಧ್ಯಾಯ ಕ್ರಮ' ಎಂಬ ವಿಷಯದ ಬಗ್ಗೆ ಮಾಹಿತಿಯನ್ನು ನೀಡಿದರು.

ಅಪರಾಹ್ನ 4 ಗಂಟೆಗೆ ಪಕ್ಕದಲ್ಲಿರುವ ಜಾನಪದಲೋಕಕ್ಕೆ ಎಲ್ಲಾ ಶಿಬಿರಾರ್ಥಿಗಳನ್ನು ಕರೆದೊಯ್ಯಲಾಯಿತು. ಎಲ್ಲಾ ಶಿಕ್ಷಕರು ಕರ್ನಾಟಕ ಜಾನಪದ ಸಿರಿಯ ಪರಿಚಯ ಮಾಡಿಕೊಂಡರು. ಸಾಯಂಕಾಲ 6.30ಕ್ಕೆ 'ಕಾವ್ಯಶಾಸ್ತ್ರವಿನೋದ' ಎಂಬ ವಿಷಯದ ಬಗ್ಗೆ ಡಾ. ಮಹೇಶ ಕಾಕತ್ಕರ್ ಅವರು ಮಾಹಿತಿ ನೀಡಿದರು. 7 ಗಂಟೆಗೆ ಶಿಬಿರಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಇದರಲ್ಲಿ ಶಿಬಿರಾರ್ಥಿಗಳು 'ಲಿಂಗನಿರ್ಣಯ', 'ವರ್ಣಮಾಲೆ' ಹಾಗೂ ಲೇಖನ ದೋಷಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಸಮಾಧಾನ ಪಡೆದುಕೊಂಡರು.

ಭೋಜನಾನಂತರ ಶಿಬಿರಾರ್ಥಿಗಳ ಪ್ರತಿಭಾ ಪ್ರದರ್ಶನದೊಂದಿಗೆ ಅಂದಿನ ಕಾರ್ಯಕ್ರಮಗಳು ಸಂಪನ್ನಗೊಂಡವು.

19.05.2011ರಂದು ಬೆಳಿಗ್ಗೆ ಶ್ರೀ ಫಾಲನೇತ್ರಯ್ಯ ಅವರ ನೇತೃತ್ವದಲ್ಲಿ ಪ್ರಾರ್ಥನೆ ಹಾಗೂ ಯೋಗಾಭ್ಯಾಸವು ನಡೆಯಿತು. ಉಪಾಹಾರಾನಂತರ 9 ಗಂಟೆಗೆ ಶ್ರೀಮತಿ ಸಾವಿತ್ರೀ ಪೂಜಾರ್ ಅವರು ಸಂಸ್ಕೃತ ಸಂಭಾಷಣ ಅಭ್ಯಾಸವನ್ನು ನಡೆಸಿದರು. ಆ ನಂತರ ಎರಡು ಅವಧಿಗಳ ಕಾಲ ವಿದುಷೀ ವಿಜಯಲಕ್ಷ್ಮೀ ಅವರು 'ವ್ಯಾಕರಣ ಹಾಗೂ ವ್ಯಾಕರಣಬೋಧನಾಕ್ರಮ'ದ ಬಗ್ಗೆ ತಿಳಿಸಿದರು.

**ಸಮಾರೋಪ:** ಅಂದು ಅಪರಾಹ್ನ 3 ಗಂಟೆಗೆ ಈ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಇದರ ದಿವ್ಯ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಹಾಸಂಸ್ಥಾನಾಧೀಶ್ವರರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ವಹಿಸಿದ್ದರು. ಅಧ್ಯಕ್ಷತೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ವಹಿಸಿದ್ದರು. ಸಮಾರೋಪ ಭಾಷಣಕಾರರಾಗಿ ಪೂರ್ಣಪ್ರಜ್ಞ ಸಂಶೋಧನ ಮಂದಿರದ ನಿರ್ದೇಶಕರಾದ ಡಾ. ಎ.ವಿ. ನಾಗಸಂಪಿಗೆ ಅವರು ಭಾಗವಹಿಸಿದ್ದರು. ಶ್ರೀ ನಂಜುಂಡಯ್ಯ, ಶ್ರೀ ಗಂಗಣ್ಣ, ಶ್ರೀ ಚಂದ್ರಶೇಖರಯ್ಯನವರು ಉಪಸ್ಥಿತರಿದ್ದರು.

ಮೂರು ದಿನಗಳ ಕಾಲ ನಡೆದ ಈ ಶಿಬಿರ ಎಲ್ಲಾ ಶಿಕ್ಷಕರಿಗೂ ಬಹಳ ಉಪಕಾರಿಯಾಯಿತು.